ಆ)

	ಪ್ರಾಥಮಿಕ ಶಾಲೆ	ಪ್ರೌಢಶಾಲೆ
ಒಟ್ಟು ಶಿಕ್ಷಕರ ಸಂಖ್ಯೆ	557	63
ತುಂಬಬೇಕಾಗಿರುವ ಶಿಕ್ಷಕರ ಸಂಖ್ಯೆ	63	ಇಲ್ಲ

ಇ) ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿಯಾಗುತ್ತಿದ್ದು ಇದು ಆದ ಕೂಡಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆಗಳು ಇಲ್ಲದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದ. ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನ್ ಕಾಮಗಾರಿ ಕೆಲಸ.

3262 - ಶ್ರೀ ಜಿ. ಎಸ್. ಆಚಾರ್ (ಬೈಂದೂರ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ವಿದ್ಯುತ್ ಸಬ್-ಸ್ಟೇಷನ್ ಕಾಮಗಾರಿಗೆ ಯಾವಾಗ ಮಂಜೂರಾತಿ ನೀಡಲಾಯಿತು.?

ಆ) ಯಾವಾಗ ಆದರೆ ಕಾರ್ಯಾರಂಭವಾಯಿತು, ಹಾಗೂ ಕಾಮಗಾರಿ ವಿಳಂಬಕ್ಕೆ ಕಾರಣಗಳೇನು?

ಇ) ಬೈಂದೂರು ಪರಿಸರದ ವಿದ್ಯುತ್ ತೊಂದರೆ ನಿವಾರಿಸಲು ಅಲ್ಲಿನ ವಿದ್ಯುತ್ ಉಪಕೇಂದ್ರ ಕಾರ್ಯಾರಂಭವನ್ನು ತ್ವರಿತಗೊಳಿಸಲಾಗುವುದೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):

ಅ) ನವೆಂಬರ್ 1988ರಲ್ಲಿ ಮಂಜೂರಾತಿ ನೀಡಲಾಯಿತು.

ಆ) ಮೇ 1991ರಲ್ಲಿ ಕಾರ್ಯವನ್ನು ಆರಂಭಿಸಲಾಯಿತು. ಕಾಮಗಾರಿಯ ವಿಳಂಬಕ್ಕೆ ಮುಖ್ಯ ಕಾರಣಗಳು :

(1) ಕುಂದಾಪುರದಿಂದ ಬೈಂದೂರಿಗೆ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣಕ್ಕೆ ಜನವರಿ 1989ರಲ್ಲಿ ಕರೆಯಲಾಗಿದ್ದ ಟೆಂಡರು ಅಸಮರ್ಪಕವಾದುದ್ದರಿಂದ ಸ್ವೀಕೃತವಾಗಲಿಲ್ಲ. ಹೀಗಾಗಿ ಪುನ: ಟೆಂಡರ್ ಅನ್ನು ಕರೆಯಬೇಕಾಯಿತು.

(2) ಈ ಮಧ್ಯದಲ್ಲಿ ಬೈಂದೂರಿನಲ್ಲಿ 110 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಗೆ ಬಂದಿತು. ಸದರಿ ಸ್ಥಳದಲ್ಲಿ 110 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪನೆ ಮಾಡುವುದೋ ಅಥವಾ ಈಗಾಗಲೇ ಮಂಜೂರಾಗಿರುವ 33 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪನೆ ಮಾಡುವುದೋ ಎಂಬ ವಿಷಯದಲ್ಲಿ ಮಂಡಳಿಯು ಪರಿಶೀಲಿಸಿ ಅಂತಿಮವಾಗಿ 33 ಕೆ. ವಿ. ಉಪ ಕೇಂದ್ರ ಸ್ಥಾಪನೆ ಮಾಡುವುದೆಂದು ತೀರ್ಮಾನ ತೆಗೆದು ಕೊಳ್ಳುವಲ್ಲಿ ವಿಳಂಬವಾಯಿತು.

ಇ) ಕುಂದಾಪುರದಿಂದ ಬೈಂದೂರಿಗೆ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿದ್ದು, ಕಾರ್ಯವು ಪ್ರಗತಿಯಲ್ಲಿದೆ. ಬಾಕಿ ಉಳಿದಿರುವ ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಲಾಗುತ್ತಿದೆ.

3265 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಿರಿಯ ಮಹಾ ವಿದ್ಯಾಲಯ, ಪದವಿ ಮಹಾ ವಿದ್ಯಾಲಯಗಳ ಅಧ್ಯಾಪಕರ, ಉಪನ್ಯಾಸಕರ ಎಷ್ಟು ಸ್ಥಾನ ಖಾಲಿ ಇದೆ?

ಆ) ಮುಖ್ಯೋಪಾಧ್ಯಾಯರು, ಪ್ರಾಶುಂಪಾಲರ ಎಷ್ಟು ಸಂಖ್ಯೆ ಖಾಲಿ ಇದೆ?

ಇ) ಮಂಜೂರಾದ ಹುದ್ದೆಗಿಂತಲೂ ಜಾಸ್ತಿಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಆ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಪ್ರಾಥಮಿಕ ಶಾಲೆ	106
ಪ್ರೌಢಶಾಲೆ	22
ಕಿರಿಯ ಮಹಾ ವಿದ್ಯಾಲಯ	7
ಪದವಿ ಮಹಾ ವಿದ್ಯಾಲಯ	11
ಒಟ್ಟು	146
ಆ) ಮುಖ್ಯ ಶಿಕ್ಷಕರು	7
ಪ್ರಾಶುಂಪಾಲರು (ಕಿರಿಯ ಕಾಲೇಜು)	4
ಒಟ್ಟು	11

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಶುಂಪಾಲರ ಸ್ಥಾನ ಖಾಲಿ ಇರುವುದಿಲ್ಲ.

ಇ) ಬಂದಿದೆ.

ಈ) ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳನ್ನು ತುಂಬಲು ಸದ್ಯದಲ್ಲೆ ಕ.ನಾ.ಸೇ.ನಿಯಮ ಮೇರೆಗೆ ಅರ್ಹ ಪ್ರೌಢ ಶಾಲಾ ಶಿಕ್ಷಕರಿಂದ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಪ್ರಾಶುಂಪಾಲರ ಹುದ್ದೆಗಳನ್ನು ತುಂಬಲು ಅರ್ಹ ಉಪನ್ಯಾಸಕರಿಗೆ ಬಡ್ತಿ ನೀಡುವ ಮೂಲಕ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗವು ಅರ್ಜಿಗಳನ್ನು ಆಹ್ವಾನಿಸಿದ್ದು ಭರ್ತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ.

ಸಕಲೇಶಪುರ ಪಟ್ಟಣದಲ್ಲಿರುವ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಸೌಲಭ್ಯ.

3346 - ಶ್ರೀ ಬಿ. ಆರ್.ಗುರುದೇಶ (ಸಕಲೇಶಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಪಟ್ಟಣದಲ್ಲಿರುವ ಬಸ್ ನಿಲ್ದಾಣವು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದ್ದು ತುಂಬಾ ಕಿರಿದಾಗಿದ್ದು ಹಾಗೂ ಪಾಲಿಯಿರುವ ನಿಲ್ದಾಣದಲ್ಲಿ